12) ಹೆಚ್. ಏಕಾಂತಯ್ಯ
13) ಜಿ.ಜಿ. ಯಲ್ಲಿಗುತ್ತಿ
14) ಎನ್. ನಾರಾಯಣಸ್ವಾಮಿ
15) ಅಜಯಕುಮಾರ್ ಸರನಾಯಕ್
16) ಶಿವಾನಂದ ಎಚ್. ಕೌಜಲಗಿ
17) ಬಸವರಾಜ ಪಾಟೀಲ್ ಅಟ್ಟೂರ್
18) ಉಮೇಶ್ ಕತ್ತಿ
19) ಕೆ.ಎಸ್. ಈಶ್ವರಪ್ಪ
20) ಎ. ರುಕ್ಮಯ್ಯ ಪೂಜಾರಿ
21) ನಾರಾಯಣರಾವ್ ಮನಹಳ್ಳಿ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಅಧ್ಯಕ್ಷರು : ಮೇಲೆ ಉಲ್ಲೇಖಿಸಿರುವ ಸದಸ್ಯರುಗಳನ್ನು ಈ ದಿವಸದ ಕಾರ್ಯಕಲಾಪಗಳು ಮುಗಿಯುವವರೆಗೆ ಸಭೆಗೆ ಬಾರದಂತೆ ನಿಷೇಧಿಸಲಾಗಿದೆ.

(ಗೊಂದಲ)

ಅಧ್ಯಕ್ಷರು : ಸಭೆಯನ್ನು ಈಗ 10 ನಿಮಿಷಗಳ ಕಾಲ ಮುಂದೂಡುತ್ತೇನೆ.

(ಸದನವು ಮತ್ತೆ 12.05 ನಿಮಿಷಕ್ಕೆ ಸಮಾವೇಶಗೊಂಡಿತು- ಮಾನ್ಯ ಅಧ್ಯಕ್ಷರು ತಮ್ಮ ಪೀಠವನ್ನು ಅಲಂಕರಿಸಿದರು)

ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿ ಚುನಾವಣೆಗಳನ್ನು ಮುಂದೂಡಿರುವ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ : ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿ ಚುನಾವಣೆಗಳನ್ನು ಏತಕ್ಕೋಸ್ಕರ ಮುಂದೂಡಲಾಗಿದೆ?

(ಈ ಹಂತದಲ್ಲಿ ಸದನದ ಬಾವಿಯಲ್ಲಿ ಕುಳಿತಿದ್ದ ಜನತಾ ದಳದ ಸದಸ್ಯರುಗಳು

"ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಚುನಾವಣೆಗಳು ಆಗಲೇಬೇಕು, ನ್ಯಾಯಾಂಗ ತನಿಖೆಯಾಗಲೇಬೇಕು, ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ, ಪ್ರಜಾಪ್ರಭುತ್ವ ವಿರೋಧಿ ಸರ್ಕಾರಕ್ಕೆ ಧಿಕ್ಕಾರ, ಪ್ರಜಾಪ್ರಭುತ್ವವನ್ನು ಕಗ್ಗೊಲೆ ಮಾಡಿದ ಸರ್ಕಾರಕ್ಕೆ ಧಿಕ್ಕಾರ" ಇತ್ಯಾದಿ ಘೋಷಣೆಗಳನ್ನು ಹಾಕಿ ಎಂದು ಒಂದೇ ಸಮನೇ ಕೂಗುತ್ತಿದ್ದರು)

(ತದನಂತರ ಸದನದ ಕಾರ್ಯಕಲಾಪಗಳಿಗೆ ಅಡ್ಡಿಯನ್ನುಂಟು ಮಾಡುತ್ತಿದ್ದ ಜನತಾದಳದ ಸದಸ್ಯರನ್ನು ಹೊರಕ್ಕೆ ಹಾಕಬೇಕೆಂದು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಾರ್ಷಲ್ರವರು ತಮ್ಮ ಸಿಬ್ಬಂದಿಗಳೊಡನೆ ಮಾನ್ಯ ಸದಸ್ಯರುಗಳಾದ ಶ್ರೀ ಹಂಪನಗೌಡ, ಗುರುಪಾದಪ್ಪ ನಾಗಮಾರಪಲ್ಲಿ, ಪಿ.ಸಿ. ಸಿದ್ದನಗೌಡರ್ ಮತ್ತು ಬಿ.ಹೆಚ್. ಬನ್ನಿಕೋಡ್ ಅವರುಗಳನ್ನು ಬಲವಂತವಾಗಿ ಎತ್ತಿಕೊಂಡು ಹೊರಕ್ಕೆ ಹಾಕಿದರು; ಹಾಗೆಯೇ ಜನತಾ ದಳದ ಇತರ ಸದಸ್ಯರುಗಳು ತಾವಾಗಿಯೇ ಹೊರಗೆ ನಡೆದರು)